# ಪಬ್ಲಿಸಿಟಿ ಗಿಮಿಕ್ ಬೇಕಾಗಿಲ್ಲ: ರಿಷಭ್

**ನಟನೆ, ನಿರ್ಮಾಣ, ನಿರ್ದೇಶನ ಹೀಗೆ ಹಲವು ದೋಣಿಯ ಮೇಲೆ ಪ್ರಯಾಣ ಮಾಡುತ್ತಿದ್ದಾರೆ ರಿಷಭ್ ಶೆಟ್ಟಿ. ಆದರೆ ಯಾವುದರಲ್ಲಿಯೂ ಹದತಪ್ಪಲಾರೆ, ಹಳಿಬಿಟ್ಟು ನಡೆಯಲಾರೆ ಎಂಬುದು ಅವರ ಸ್ಪಷ್ಟ ನುಡಿ.**

**■ ಪದ್ಮನಾಭ ಭಟ್**

‘ಸಮಾಜದಲ್ಲಿ ಬಲಪಂಥ–ಎಡಪಂಥಗಳ ಗದ್ದಲ ಜೋರು ನಡೆಯುತ್ತಿದೆ. ಬದುಕಿನಲ್ಲಿ ರಚನಾತ್ಮಕವಾಗಿ ಏನೂ ಮಾಡುತ್ತಿಲ್ಲ. ಆದರೆ ಸೋಷಿಯಲ್ ಮೀಡಿಯಾಗಳಲ್ಲಿ ಬಾಯಿ ಬಡಿದುಕೊಳ್ಳುವುದನ್ನೇ ಕೆಲವರು ಉದ್ಯೋಗ ಮಾಡಿಕೊಂಡಿದ್ದಾರೆ. ಬೇಡದೇ ಇರೋದನ್ನು ಮಾತಾಡಿಕೊಂಡು ಇರ್ತಾರೆ’ ಹೀಗೆ ಮೆಣಸಿನಕಾಯಿ ಘಾಟಿನಷ್ಟೇ ಕಟುವಾಗಿ ಹೇಳಿದರು ನಿರ್ದೇಶಕ, ನಟ ರಿಷಭ್ ಶೆಟ್ಟಿ.

ತಾವು ನಾಯಕನಾಗಿ ನಟಿಸುತ್ತಿರುವ ‘ನಾಥೂರಾಮ’ ಸಿನಿಮಾ ಕುರಿತು ಮಾತಾಡುತ್ತ ಹೇಳಿದ ಮಾತುಗಳಿವು. ಕೆಲವು ತಿಂಗಳ ಹಿಂದೆ ಮುಹೂರ್ತವಾಗಿ, ಚಿತ್ರೀಕರಣವೂ ಶುರು ಮಾಡಿಕೊಂಡಿದ್ದ ‘ನಾಥೂರಾಮ’ ಚಿತ್ರದ ಚಿತ್ರೀಕರಣ ಯಾಕೆ ನಿಂತಿದೆ ಎನ್ನುವ ಬಗ್ಗೆ ಅವರು ವಿವರಿಸುತ್ತಿದ್ದರು.

ಇಂದಿನ ಸಮಾಜ ಎಡ–ಬಲಗಳೆಂದು ಗುಂಪು ಮಾಡಿಕೊಂಡು ಕೆಸರೆರಚಾಟದಲ್ಲಿ ತೊಡಗಿರುವಾಗ ಅನವಶ್ಯಕವಾಗಿ ಒಂದು ವಿವಾದ ಹುಟ್ಟುಹಾಕಿ, ಗಿಮಿಕ್ ಮಾಡಿ ನೆಗೆಟಿವ್ ಪ್ರಚಾರದ ಮೂಲಕ ಜನರನ್ನು ತಲುಪುವುದು ನನಗಿಷ್ಟ ಇಲ್ಲ ಎಂಬುದು ಅವರ ಸ್ಪಷ್ಟ ಅಭಿಪ್ರಾಯ.

‘ಸ್ಕ್ರಿಪ್ಟ್ ಪೂರ್ಣಗೊಂಡಿರಲಿಲ್ಲ. ಆದರೆ ಅವಸರ ಮಾಡಿ ಮುಹೂರ್ತ ಮಾಡಿದ್ರು. ಆದರೆ ಅದಕ್ಕೊಂದು ಸ್ಪಷ್ಟತೆ ಸಿಗದೇ ಚಿತ್ರೀಕರಣ ಮಾಡುವುದು ಸರಿಯಲ್ಲ ಎಂದು ನಾನು, ನಿರ್ದೇಶಕರು ಚರ್ಚಿಸಿ ನಿರ್ಮಾಪಕರೊಂದಿಗೆ ಮಾತನಾಡಿ ಚಿತ್ರವನ್ನು ಮುಂದಿನ ವರ್ಷಕ್ಕೆ ಮುಂದೂಡಿದ್ದೇವೆ’ ಎಂದು ಅವರು ವಿವರಿಸಿದರು.

ಸದ್ಯಕ್ಕೆ ರಿಷಭ್ ತಮ್ಮದೇ ನಿರ್ದೇಶನದ ‘ರುದ್ರ ಪ್ರಯಾಗ’ದ ಸಿದ್ಧತೆಯಲ್ಲಿ ಬ್ಯುಸಿಯಾಗಿದ್ದಾರೆ. ಅನಂತ್ ನಾಗ್ ಮತ್ತು ಶ್ರದ್ಧಾ ಶ್ರೀನಾಥ್ ಈ ಚಿತ್ರದ ಮುಖ್ಯಭೂಮಿಕೆಯಲ್ಲಿ ನಟಿಸುತ್ತಿದ್ದಾರೆ. ರುದ್ರ ಪ್ರಯಾಗದ ಪೋಸ್ಟರ್ ನೋಡಿ ಹಲವರು ಇದು ಜಿಮ್ ಕಾರ್ಬೆಟ್ ಪುಸ್ತಕ ಆಧರಿಸಿದ ಕಥೆ ಎಂದುಕೊಂಡಿದ್ದಾರೆ. ಆದರೆ ರಿಷಭ್ ಅದನ್ನು ಅಲ್ಲಗಳೆಯುತ್ತಾರೆ.

‘ನಮ್ಮ ಸಿನಿಮಾ ಜಿಮ್ ಕಾರ್ಬೆಟ್ ಅವರ ಪುಸ್ತಕ ಆಧರಿಸಿದ್ದಲ್ಲ. ಆದರೆ ಖಂಡಿತವಾಗಿಯೂ ಜಿಮ್ ಕಾರ್ಬೆಟ್, ಕೆನತ್ ಆಂಡರ್ಸನ್ ಅವರ ಅನುಭವಕಥನಗಳನ್ನು ನೆನಪಿಸುತ್ತದೆ. ಇದೊಂದು ಥ್ರಿಲ್ಲರ್ ಸಿನಿಮಾ. ಬಹುಭಾಗ ಕಾಡಿನಲ್ಲಿಯೇ ನಡೆಯುತ್ತದೆ. ದಾಂಡೇಲಿ, ಬೆಳಗಾವಿ, ಖಾನಾಪುರ ಸುತ್ತಮುತ್ತಲಿನ ಪ್ರದೇಶದಲ್ಲಿ ಚಿತ್ರೀಕರಣ ನಡೆಸಲು ಯೋಜನೆ ಹಾಕಿಕೊಂಡಿದ್ದೇವೆ. ಡಿಸೆಂಬರ್ ಮೊದಲ ವಾರದಿಂದ ಚಿತ್ರೀಕರಣ ಆರಂಭವಾಗುತ್ತದೆ’ ಎಂದು ವಿವರಣೆ ನೀಡುತ್ತಾರೆ.

ನಿರ್ದೇಶಕನ ಟೋಪಿ ಧರಿಸಿಕೊಂಡಿರುವಾಗ, ನಟನೆಯ ಪೋಷಾಕು ತೊಡುವುದು ರಿಷಭ್‌ಗೆ ಇಷ್ಟವಿಲ್ಲ. ಹಾಗಾಗಿಯೇ ‘ರುದ್ರ ಪ್ರಯಾಗ’ದಲ್ಲಿ ತಾವು ಕ್ಯಾಮೆರಾ ಹಿಂದಷ್ಟೇ ಕೆಲಸ ಮಾಡಲು ನಿರ್ಧರಿಸಿದ್ದಾರೆ. ‘ಈ ಚಿತ್ರದಲ್ಲಿ ನಾನು ನಟಿಸುತ್ತಿಲ್ಲ. ಯಾಕೆಂದರೆ ಈ ಸಬ್ಜೆಕ್ಟ್ ನನಗೆ ಹೊಂದುವುದಿಲ್ಲ. ಅಲ್ಲದೆ ನಿರ್ದೇಶನ ಎನ್ನುವುದು ದೊಡ್ಡ ಟಾಸ್ಕ್. ಅದಕ್ಕೆ ನಮ್ಮನ್ನು ನಾವು ನೂರಕ್ಕೆ ನೂರರಷ್ಟು ಕೊಟ್ಟುಕೊಂಡರೂ ಸಾಲುವುದಿಲ್ಲ. ಹಾಗಾಗಿ ಈ ಚಿತ್ರದಲ್ಲಿ ನಟಿಸದಿರಲು ನಿರ್ಧರಿಸಿದ್ದೇನೆ. ನನಗೆ ಹೊಂದುವಂಥ ಕೆಲವು ಕಥೆಗಳನ್ನೂ ನಾನು ಬರೆದಿಟ್ಟುಕೊಂಡಿದ್ದೇನೆ. ಮುಂದೆ ಬೇರೆ ನಿರ್ದೇಶಕರ ಕೈಗೆ ಆ ಕಥೆಯನ್ನು ಕೊಟ್ಟು ನಾನು ನಟಿಸುವ ಯೋಚನೆ ಇದೆ’ ಎನ್ನುತ್ತಾರೆ ರಿಷಭ್.

ನಟನೆ, ನಿರ್ದೇಶನದ ಜೊತೆಗೆ ತಮ್ಮ ನಿರ್ಮಾಣ ಸಂಸ್ಥೆಯಿಂದ ಹೊಸ ಪೀಳಿಗೆಯ ಪ್ರತಿಭಾವಂತ ನಿರ್ದೇಶಕರನ್ನು ಪರಿಚಯಿಸುವ ಕೆಲಸವನ್ನೂ ಶೆಟ್ಟರು ಮಾಡುತ್ತಿದ್ದಾರೆ. ರಿಷಭ್ ನಿರ್ಮಾಣ ಮಾಡಿರುವ, ನಟೇಶ್ ಹೆಗಡೆ ಎಂಬ ಯುವ ನಿರ್ದೇಶಕ ನಿರ್ದೇಶಿಸಿರುವ ಸಿನಿಮಾವೊಂದರ ಚಿತ್ರೀಕರಣ ಮುಗಿದಿದೆ. ‘ಅದು ಸಂಪೂರ್ಣ ಪ್ರಯೋಗಾತ್ಮಕ ಚಿತ್ರ. ಹಾಗಾಗಿ ಮೊದಲು ಅಂತರರಾಷ್ಟ್ರೀಯ ಚಿತ್ರೋತ್ಸವಗಳಿಗೆ ಕಳಿಸುತ್ತೇವೆ. ನಂತರ ಚಿತ್ರಮಂದಿರಗಳಲ್ಲಿ ಬಿಡುಗಡೆ ಮಾಡುತ್ತೇವೆ’ ಎಂದು ವಿವರಣೆ ನೀಡುತ್ತಾರೆ. ಅವರ ನಿರ್ಮಾಣದ ಇನ್ನೂ ಐದು ಸಿನಿಮಾಗಳು ನಿರ್ಮಾಣಗೊಳ್ಳುತ್ತಿವೆಯಂತೆ.

ಅಂದಹಾಗೆ, ಇನ್ನೂ ಹೆಸರಿಡದ ಇನ್ನೊಂದು ಸಿನಿಮಾದಲ್ಲಿ ರಿಷಭ್ ನಟಿಸುತ್ತಿದ್ದಾರೆ. ಆದರೆ ನಿರ್ದೇಶಕರು, ‘ಚಿತ್ರದ ಬಗ್ಗೆ ಮಾತಾಡುವಂತಿಲ್ಲ’ ಎಂದು ಷರತ್ತು ಹಾಕಿರುವುದರಿಂದ ‘ಕಾದು ನೋಡಿ’ ಎಂದು ಮೀಸೆಯಡಿಯಲ್ಲಿ ಸುಮ್ಮನೆ ನಗುತ್ತಾರೆ ಅವರು. ■

